<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.109/2022</u>

ದಿಃ 25.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-13 Pw-11

ಹೆಸರು ಃ ಗೀತಪ್ರಿಯಾ
ಗಂಡನ ಹೆಸರು ಃ ಸುಬಿಂದ್
ವಯಸ್ಸು ಃ 50 ವರ್ಷ
ಉದ್ಯೋಗ ಃ ಹಿರಿಯ ವೈದ್ಯಾಧಿಕಾರಿ,
ಅಟಲ್ ಬಿಹಾರಿ ವಾಜಪೇಯಿ
ಮೆಡಿಕಲ್ ಕಾಲೇಜು,
ಬೆಂಗಳೂರು
ವಾಸಸ್ಥಳ ಃ ಬೆಂಗಳೂರು

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

2015ರಿಂದ 2018ರವರೆಗೆ ನಾನು ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ16.08.2016ರಂದು ಬಿಡದಿ ಪೊಲೀಸರು ಡಿಎನ್ಎ ಪರೀಕ್ಷೆಗಾಗಿ ರಕ್ತದ ಮಾದರಿಯನ್ನು ಪಡೆದುಕೊಳ್ಳಲು ಮನವಿ ಸಲ್ಲಿಸಿದ್ದು, ಅದರಂತೆ ನಾನು ರಾಮನಗರ ನ್ಯಾಯಾಲಯಕ್ಕೆ ಹಾಜರಾಗಿ ಚಾಸಾ.2 ಪವಿತ್ರ ಅವರ ರಕ್ತದ ಮಾದರಿಯನ್ನು ಡಿಎನ್ಎ ಪರೀಕ್ಷೆಗಾಗಿ ಪಡೆದುಕೊಂಡು ಅದೇ ದಿನ ಅದನ್ನು ಪ್ಯಾಕ್ ಮಾಡಿ ಸೀಲ್ ಮಾಡಿ 'ಆರ್' ಎಂಬ ಸೀಲ್‌ನೊಂದಿಗೆ ಸಂಬಂಧಿಸಿದ ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ.

3. ಸದರಿ ರಕ್ತದ ಮಾದರಿಗಳನ್ನು ಪಡೆದುಕೊಳ್ಳುವ ಸಮಯದಲ್ಲಿ ಐಡೆಂಟಿಫಿಕೇಷನ್ ಫಾರ್ಮ್ ಮತ್ತು ಫಾರ್ವರ್ಡಿಂಗ್ ನೋಟ್‌ಗಳನ್ನು ಮಾಡಿದ್ದು, ಅವುಗಳನ್ನು ಈಗ ನೋಡಿ ಗುರುತಿಸಬಲ್ಲೆ. ಸದರಿ ದಾಖಲಾತಿಗಳನ್ನು ಮುಖ್ಯ ಕಡತದಲ್ಲಿ ನಿ.ಪಿ.20(ಎ) ಮತ್ತು ನಿ.ಪಿ.20(ಬಿ) ಎಂದು ಗುರುತಿಸಲಾಗಿದ್ದು ಈ ಕಡತದಲ್ಲಿ ಅದನ್ನು ನಿ.ಪಿ.11 ಮತ್ತು 12 ಹಾಗೂ ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.11(ಎ) ಮತ್ತು ನಿ.ಪಿ.12(ಎ) ಎಂದು ಗುರುತಿಸಲಾಯಿತು. (ಈ ದಾಖಲಾತಿಯನ್ನು ದೃಢೀಕರಿಸಿ ಈ ಕಡತದಲ್ಲಿ ಇರಿಸಲು ನ್ಯಾಯಾಲಯದ ಕಚೇರಿಗೆ ಆದೇಶಿಸಲಾಯಿತು)

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ವಕೀಲರಿಂದ 1ನೇ ಆರೋಪಿಯ ಪರವಾಗಿಃ</u>

ದಿಃ16.08.2016ರಂದು ಬಿಡದಿ ಪೊಲೀಸರ ಕೋರಿಕೆಯ ಮೇರೆಗೆ ಚಾಸಾ.2 ಇವಳ ರಕ್ತದ ಮಾದರಿಗಳನ್ನು ಡಿಎನ್‌ಎ ಪರೀಕ್ಷೆಗೋಸ್ಕರ ರಾಮನಗರದ ನ್ಯಾಯಾಲಯದಲ್ಲಿ ಪಡೆದುಕೊಂಡು ಪ್ಯಾಕ್ ಮಾಡಿ, 'ಆರ್' ಎಂಬ ಅಕ್ಷರದಲ್ಲಿ ಸೀಲ್ ಮಾಡಿ ಅದನ್ನು ಪೊಲೀಸರಿಗೆ ನೀಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅದೇ ಸಮಯದಲ್ಲಿ ನಿ.ಪಿ.11 ಮತ್ತು ನಿ.ಪಿ.12ಗಳಂತಿರುವ ಐಡೆಂಟಿಫಿಕೇಷನ್ ಫಾರ್ಮ್ ಮತ್ತು

ಫಾರ್ವರ್ಡಿಂಗ್ ನೋಟ್‌ಗಳನ್ನು ಮಾಡಿದ್ದು ಅವುಗಳ ಮೇಲೆ ನಾನು ಸಹಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.